# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## -:ವಾರ್ಡ್-42ರ ವಾರ್ಡ್ ಸಮಿತಿ ಸಭೆಯ ನಡವಳಿಗಳು:-

ದಿನಾಂಕ: 04.12.2021 ರಂದು ಬೆಳಿಗ್ಗೆ 11.00 ಗಂಟೆಗೆ ವಾರ್ಡ್ ನಂ.42 ಲಕ್ಷ್ಮೀದೇವಿನಗರ, ವಾರ್ಡ್ ಸಮಿತಿ ಸಭೆಯನ್ನು ವಾರ್ಡ್ ನಂ.42ರ ವಾರ್ಡ್ ಕಛೇರಿಯಲ್ಲಿ ನಡೆಸಲಾಗಿದ್ದು, ಸದರಿ ಸಭೆಯ ಸಭಾ ನಡವಳಿಗಳು

ಸಭೆಗೆ ಹಾಜರಿದ್ದ ಅಧಿಕಾರಿಗಳು:-

1. ಡಾ|| ಎಂ. ಜಿ. ಹಳ್ಳಿ ಶಿವರಾಮ್, ಅಧ್ಯಕ್ಷರು ಮತ್ತು ನೋಡಲ್ ಅಧಿಕಾರಿಗಳು
2. ಶ್ರೀಮತಿ. ನಿರ್ಮಲ, ಕಂದಾಯ ವಸೂಲಿಗಾರರು ಮತ್ತು ಕಾರ್ಯದರ್ಶಿಗಳು,
3. ಶ್ರೀ. ದೀಪಕ್, ಸಹಾಯಕ ಕಾರ್ಯಪಾಲಕ ಅಭಿಯಂತರರು, ಬಿ.ಡಬ್ಲ್ಯೂ.ಎಸ್.ಎಸ್.ಬಿ.
4. ಶ್ರೀ. ಶ್ರೀನಿವಾಸ್, ಹಿರಿಯ ಆರೋಗ್ಯ ಪರಿವೀಕ್ಷಕರು, ಪಶುಪಾಲನೆ.
5. ನಾರಾಯಣ, ಹಿರಿಯ ಆರೋಗ್ಯ ಪರಿವೀಕ್ಷಕರು.
6. ಮಣಿ ಮೇಘಾಲಯ್ಯೆ, ಕಿರಿಯ ಆರೋಗ್ಯ ಪರಿವೀಕ್ಷರು
7. ದೇವರಾಜ್, ಮೇಲ್ವಿಚಾರಕರು
8. ನಾರಾಯಣಸ್ವಾಮಿ, ಮೇಲ್ವಿಚಾರಕರು
9. ನಾಗರಾಜು, ಸೂಪರ್‌ವೈಸರ್
10. ಮುತ್ಯಾಲಪ್ಪ, ಸೂಪರ್‌ವೈಸರ್
11. ದಾಕ್ಷಯಿಣಿ ಲಿಂಕ್ ವರ್ಕರ್
12. ಪ್ರಮೀಳ ಲಿಂಕ್ ವರ್ಕರ್
13. ಮುನಿರಾಜು, ವಾರ್ಡ್ ಮಾರ್ಷಲ್

ವಾರ್ಡ್-42ರ ವಾರ್ಡ್ ಸಮಿತಿ ಸಭೆಗೆ ಹಾಜರಿದ್ದ ಎಲ್ಲಾ ಸದಸ್ಯರು ಮತ್ತು ಅಧಿಕಾರಿಗಳನು ಸ್ವಾಗತಿಸಿ ವಾರ್ಡ್ ಸಮಿತಿ ಸಭೆಯು ಪ್ರಾರಂಭವಾಯಿತು.

ವಾರ್ಡ್ ಸಮಿತಿ ಸದಸ್ಯರಾದ ಶ್ರೀ. ಮುರಳಿ ರವರು ಮಾತನಾಡಿ ಕೂಲಿ ನಗ ಮೇಲುಸೇತುವ ಮೇಲೆ ಬಿಬಿಎಂಪಿ ಕಾಂಪ್ಯಾಕ್ಟರ್ ವಾಹನ ಹಾಗೂ ಇತರೆ ವಾಹನಗಳನು ನಿಲ್ಲಿಸುತ್ತಿದ್ದು, ಅದರಿಂದ ಬಿಬಿಎಂಪಿ ಕಾಂಪ್ಯಾಕ್ಟರ್ ವಾಹನದಿಂದ ಕಸದ ವಾಸನೆಬರುತ್ತಿರುತ್ತ ಮತ್ತು ಇತರೆ ವಾಹನಗಳನ್ನು ತೆರವುಗೊಳಿಸುವಂತೆ ಕೋರಿದ್ದು, ಅಧ್ಯಕ್ಷರು ಕ್ರಮ ವಹಿಸುವಂ ಸಂಬಂಧಿಸಿದ ಅಧಿಕಾರಿಗಳಿಗೆ ತಿಳಿಸಿದರು.

ಕ್ರಮ: ಸಂಚಾರಿ ಪೋಲೀಸ್ ಇಲಾಖೆ (ರಾಜಾಜಿನಗರ)

ಶ್ರೀ. ಶಶಿಕುಮಾರ್ ರವರು ಮಾತನಾಡಿ ಕೂಲಿ ನಗರದ ಮೇಲುಸೇತುವೆ, ವೀಣಾ ಶಾಲೆಯ ಹತ್ತಿರ, ಜೈಭುವನೇಶ್ವರಿನಗರದ ಆಸ್ಪತ್ರೆಯ ರಸ್ತೆಯಲ್ಲಿ ಕಾನೂನುಬಾಹಿರವಾಗಿ ಚಟುವಟಿಕೆಗಳ

ನಡೆಯುತ್ತಿದ್ದು ಸಾರ್ವಜನಿಕರು ಓಡಾಡಲು ತೊಂದರೆಯಾಗುತ್ತಿದೆ ಎಂದು ತಿಳಿಸಿದರು. ಅಧ್ಯಕ್ಷರು ಕ್ರಮ ವಹಿಸುವಂತೆ ಸಂಬಂಧಿಸಿದ ಅಧಿಕಾರಿಗಳಿಗೆ ತಿಳಿಸಿದರು.

ಕ್ರಮ: ಪೋಲೀಸ್ ಇಲಾಖೆ(ನಂದಿನಿ ಬಡಾವಣೆ)

ಶ್ರೀ. ಶಶಿಕುಮಾರ್ ರವರು ಮಾತನಾಡಿ ಕೂಲಿ ನಗರ ಮೇಲುಸೇತುವ ಮೇಲೆ ದೊಡ್ಡ ಹಳ್ಳ ಬಿದ್ದಿದ್ದು, ಅದರಿಂದ ಅಪಘಾತಗಳು ಉಂಟಾಗುತ್ತಿದ್ದು, ಅದನ್ನು ಸರಿಪಡಿಸಿಕೊಡಬೇಕೆಂದು ಕೋರಿದರು.

ಕ್ರಮ: ಸಹಾಯಕ ಕಾರ್ಯಪಾಲಕ ಅಭಿಯಂತರರು (ಗೊರಗುಂಟೆಪಾಳ್ಯ)

ಶ್ರೀ. ಮಧು ರವರು ಮಾತನಾಡಿ ಐ.ಆರ್. ಪಾಲಿಟೆಕ್ನಿಕ್ ರಸ್ತೆ ತುಂಬಾ ಹದಗೆಟ್ಟಿದ್ದು, ಇದರಿಂದ ಅಪಘಾತಗಳು ಉಂಟಾಗುತ್ತಿವೆ ಇದನ್ನು ಸರಿಪಡಿಸಿಕೊಡಬೇಕೆಂದು ಮತ್ತು ಸಂಜಯಗಾಂಧಿ ನಗರದಲ್ಲಿ ಕೊಳಚೆ ನೀರು ಸರಿಯಾಗಿ ಹರಿದುಹೋಗಲು ಮೋರಿ ಇಲ್ಲದೆ ಇರುವ ಕಾರಣ ಮೋರಿಯನ್ನು ಮಾಡಿಸಿಕೊಡಬೇಕೆಂದು ಕೋರಿದರು.

ಕ್ರಮ: ಸಹಾಯಕ ಕಾರ್ಯಪಾಲಕ ಅಭಿಯಂತರರು (ಗೊರಗುಂಟೆಪಾಳ್ಯ)

ಶ್ರೀ. ಶಶಿಕುಮಾರ್ ರವರು ಮಾತನಾಡಿ ನಂದಿನಿ ಲೇಔಟ್, 2ನೇ ಬ್ಲಾಕ್, ಆಂಜನೇಯ ದೇವಸ್ಥಾನದ ಹಿಂಭಾಗದ ಹಳೆಯ ಕಟ್ಟಡದ ಸ್ಯಾನಿಟರಿ ಪೈಪ್ ಹಾಳಾಗಿದ್ದು, ಅದರಿಂದ ದುರ್ವಾಸನೆ ಬರುತ್ತಿದ್ದು, ಇದರಿಂದ ಅಕ್ಕ-ಪಕ್ಕದ ಮನೆಯವರಿಗೆ ತೊಂದರೆ ಉಂಟಾಗುತ್ತಿದ್ದು, ಇದನ್ನು ಸರಿಪಡಿಸಿಕೊಡಬೇಕೆಂದು ಕೋರಿದರು.

ಕ್ರಮ: ಸಹಾಯಕ ಕಾರ್ಯಪಾಲಕ ಅಭಿಯಂತರರು (ಗೊರಗುಂಟೆಪಾಳ್ಯ)

ಶ್ರೀ. ರಮೇಶ್ ರವರು ಮಾತನಾಡಿ ಗೀತಾ ಶಾಲೆಯ ಹತ್ತಿರ ದೊಡ್ಡ ಹಳ್ಳ ಬಿದ್ದಿದ್ದು, ಅದನ್ನು ಸರಿಪಡಿಸಿಕೊಡಬೇಕೆಂದು ಕೋರಿದರು.

ಕ್ರಮ: ಸಹಾಯಕ ಕಾರ್ಯಪಾಲಕ ಅಭಿಯಂತರರು (ಗೊರಗುಂಟೆಪಾಳ್ಯ)

ಆರ್. ವಿ. ಎಸ್. ಶಾಲೆಯ ಹತ್ತಿರ ರಾಜಕಾಲುವೆ ಇದ್ದು ಅದಕ್ಕೆ ಮೆಸ್ ಹಾಕಿಸಿಕೊಡಬೇಕೆಂದು ಕೋರಿದರು.

ಕ್ರಮ: ರಾಜಕಾಲುವೆ ಸಹಾಯಕ ಕಾರ್ಯಪಾಲಕ ಅಭಿಯಂತರರು (ಬೃಹತ್ ನೀರಾವರಿ)

ವಾರ್ಡ್ ಸದಸ್ಯರಾದ ಶ್ರೀ. ಚೇತನ್ ರವರು ಮಾತನಾಡಿ ಗೀತಾ ಶಾಲೆಯ ಹತ್ತಿರದ ಬೋರ್‌ವೆಲ್ ದುಸ್ಥಿತಿಯಲ್ಲಿ ಇದ್ದು, ಅದನ್ನು ಸರಿಪಡಿಸಿಕೊಡಬೇಕೆಂದು ಕೋರಿದರು.

ಕ್ರಮ: ಸಹಾಯಕ ಕಾರ್ಯಪಾಲಕ ಅಭಿಯಂತರರು (ಬಿ.ಡಬ್ಲ್ಯೂ.ಎಸ್.ಎಸ್.ಬಿ.)

ಕೇಬಲ್‌ಗಳು ಜೋತು ಬಿದ್ದಿದ್ದು, ವಸತಿಯೇತರ ಮನೆಗಳಿಗೆ ಹಾಗೂ ಸಾರ್ವಜನಿಕರಿಗೆ ಹಾನಿಯಾ
ಸಂಭವವಿರುವುದರಿಂತೆ ಅದನ್ನು ಸರಿಪಡಿಸಿಕೊಡಬೇಕೆಂದು ಕೋರಿದರು.

ಕ್ರಮ: ಸಹಾಯಕ ಕಾರ್ಯಪಾಲಕ ಅಭಿಯಂತರರು (ಬೆಸ್ಕಾಂ ವಿಭಾಗ ಎನ್4)

ಶ್ರೀ. ಪವನ್ ರವರು ಮಾತನಾಡಿ ಇ.ಎಸ್.ಐ. ಆಸ್ಪತ್ರೆಯ ರಸ್ತೆಯಲ್ಲಿ ಅಡ್ಡಾದಿಡ್ಡಿ ವಾಹನ ಓಡಾಡುವವರ ಸಂಖ್ಯೆ ಹೆಚ್ಚಾಗಿದ್ದು, ಒಬ್ಬ ಸಂಚಾರಿ ಪೋಲಿಸರನ್ನು ನಿಯೋಜಿಸಬೇಕೆಂದು ಕೋರಿದ

ಕ್ರಮ: ಸಂಚಾರಿ ಪೋಲಿಸ್ ಇಲಾಖೆ (ಯಶವಂತಪುರ)

ವಾರ್ಡ್ ಸಮಿತಿ ಸದಸ್ಯರು ಶ್ರೀ. ಮುರಳಿ ರವರು ಮಾತನಾಡಿ ವಾರ್ಡ್ ನಂ.42ರಲ್ಲಿ ಹೆಚ್ಚು ಭಾಗವಿದ್ದು, ಹೆಚ್ಚು ಪೌರಕಾರ್ಮಿಕರು ಈ ಪ್ರದೇಶಗಳಲ್ಲೇ ವಾಸಮಾಡುತ್ತಿದ್ದು, ಕೊಳಚೆ ಪ್ರದೇ ಮನೆಗಳು ದುರಸ್ಥಿಯನ್ನು ಸರಿಪಡಿಸುವಂತೆ ಕೇಳಿದರು.

ಕ್ರಮ: ಸಹಾಯಕ ಕಾರ್ಯಪಾಲಕ ಅಭಿಯಂತರರು (ಸ್ಲಂ ಬೋರ್ಡ್)

ಡಾ. ರೇಣುಕಾ ಪ್ರಸಾದ್ ರವರು ಮಾತನಾಡಿ ಲಕ್ಷ್ಮೀದೇವಿನಗರ ವಾರ್ಡಿನಲ್ಲಿ ಕೊರ ಲಸಿಕೆಯು 1ನೇ ಡೋಸ್ ಶೇಕಡ 90ರಷ್ಟು ಮುಗಿದಿದ್ದು, 2ನೇ ಡೋಸ್ ಪಡೆಯುವವರ 19,000 ಕ್ಕಿಂತ ಹೆಚ್ಚಾಗಿದೆ ಅದ್ದರಿಂದ ಸಾರ್ವಜನಿಕರು 2ನೇ ಡೋಸ್ ಪಡೆಯುವಂತೆ ಮೂಡಿಸಲು ವಾರ್ಡ್ ಸಮಿತಿ ಸದಸ್ಯರು ಸಹಕರಿಸಬೇಕೆಂದು ಕೋರಿದರು. ನಮ್ಮ ವಾಡಿ ಪಾಸಿಟಿವಿಟಿ ರೇಟ್ ಕಡಿಮೆ ಇದ್ದು, ಮತ್ತು ಡೆತ್ ರೇಟ್ ಕೂಡಾ ಕಡಿಮೆ ಇರುವುದು ಸಂತೋ ವಿಷಯವಾಗಿದೆ ಎಂದು ಸಂತಸವನ್ನು ವ್ಯಕ್ತಪಡಿಸಿದರು.

ವಂದನೆಗಳೊಂದಿಗೆ ಸಭೆಯನ್ನು ಮಾನ್ಯ ಕಾರ್ಯದರ್ಶಿಗಳು ಮುಕ್ತಾಯಗೊಳಿಸಿದರು.

Nirmala K.
(ಶ್ರೀಮತಿ. ನಿರ್ಮಲ)
ಕಂದಾಯ ವಸೂಲಿಗಾರರು
ಮತ್ತು ಕಾರ್ಯದರ್ಶಿ

(ಡಾ|| ಎಂ. ಜಿ. ಹಳ್ಳಿ ಶಿವರಾ...)
ಅಧ್ಯಕ್ಷರು ಮತ್ತು ನೋಡಲ್ ಅಧಿಕಾರಿ